Club Band' (bit.ly/39IeYCJ)ಗೆ ಸುಮಾರು ಏಳುನೂರು ಗಂಟೆಗಳ ಕಾಲ ಕೆಲಸ ಮಾಡಿದರು. ಆಗ ಲಭ್ಯವಿದ್ದ ಎಲ್ಲ ತಂತ್ರಗಳನ್ನು ಬಳಸಿಕೊಂಡು ವಿಶಿಷ್ಟವಾಗಿ ಮುದ್ರಿಸಿದ ಆ ಆಲ್ಬಮ್ ಹೊರಬಂದ ತಕ್ಷಣ ಸಾಮಾನ್ಯ ಸಂಗೀತಾಭಿಮಾನಿಗಳನ್ನಲ್ಲದೆ ತಜ್ಞರನ್ನೂ ದಂಗುಬಡಿಸಿತು. ತುಂಬಾ ಸಂಕೀರ್ಣವಾದ ರೆಕಾರ್ಡಿಂಗನ್ನು ಆಗ ಲಭ್ಯವಿದ್ದ ನಾಲ್ಕು ಟ್ರ್ಯಾಕಿನ ತಂತ್ರಜ್ಞಾನ ಉಪಯೋಗಿಸಿಕೊಂಡು ಮಾಡಿದ್ದು ಸಮಕಾಲೀನ ಕಲಾವಿದರನ್ನು ಅಚ್ಚರಿಗೆ ದೂಡಿತು. ಬಿಡುಗಡೆಯಾದ ಮೂರೇ ತಿಂಗಳಲ್ಲಿ ಇಪ್ಪತ್ತೈದು ಲಕ್ಷ ಪ್ರತಿಗಳು ಮಾರಾಟವಾಗಿ ದಾಖಲೆ ನಿರ್ಮಿಸಿತು. (ಅದರ ಜನಪ್ರಿಯತೆ ಇಪ್ಪತ್ತೊಂದನೇ ಶತಮಾನದಲ್ಲೂ ಮುಂದುವರೆದು ಹಲವು ಪ್ರಸಿದ್ಧರ 'ಸಾರ್ವಕಾಲಿಕ ಶ್ರೇಷ್ಠ ಆಲ್ಬಮ್'ಗಳ ಪಟ್ಟಿಯಲ್ಲಿ ಒಂದನೇ ಸ್ಥಾನ ಪಡೆದಿದೆ.)

ಬ್ರಿಯಾನ್ ಸಾವು

ಎಲ್ಲವೂ ಚೆನ್ನಾಗಿದೆ ಎಂದುಕೊಳ್ಳುವಾಗಲೇ ದುರಂತವೊಂದು ನಡೆದುಹೋಯಿತು. ಅವರ ಎಲ್ಲ ವ್ಯವಹಾರಗಳನ್ನು ಹ್ಯಾಂಬರ್ಗ್‌ನ ಕಾಲದಿಂದಲೂ ನೋಡಿಕೊಳ್ಳುತ್ತಿದ್ದ ಮ್ಯಾನೇಜರ್ ಬ್ರಿಯಾನ್ ಎಪ್‌ಸ್ಟೀನ್ ಔಷಧಿಯೊಂದರ ಓವರ್ ಡೋಸ್‌ನಿಂದ ತೀರಿಕೊಂಡ. ಸಂಗೀತವನ್ನು ಬಿಟ್ಟು ಬೇರೇನೂ ತಿಳಿಯದ ಜಾನ್ ಮತ್ತು ಸಂಗಡಿಗರು ಆ ಸುದ್ದಿಯಿಂದ ಛಿದ್ರ ಛಿದ್ರಗೊಂಡರು. ಸ್ವಂತ ತಂದೆಯೇ ತೀರಿಕೊಂಡರೂ ಆಗದಷ್ಟು ಆಘಾತಗೊಂಡು ಕುಸಿದುಹೋದರು.

ಉತ್ತುಂಗದಿಂದ ಇಳಿಜಾರಿನೆಡೆಗೆ

ಜನಪ್ರಿಯತೆಯ ಜೊತೆಯಲ್ಲಿ ಅವರ ನಡುವೆ ಭಿನ್ನಾಭಿಪ್ರಾಯಗಳು ಹೆಚ್ಚುತ್ತಿದ್ದವು. ತಂಡದ ಮುಖ್ಯಸ್ಥನ ಸ್ಥಾನವನ್ನು ಜಾನ್ ಬದಲು ಪೌಲ್ ತುಂಬಿದ್ದ. ಜಾರ್ಜ್ ಹಲವು ಬಾರಿ ತನ್ನ ಸೃಜನಶೀಲತೆಗೆ ತಕ್ಕ ಜಾಗ ದೊರೆಯುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸುತ್ತಿದ್ದ. ಅವರೆಲ್ಲರ ಮಧ್ಯೆ ಸಂಧಾನಕಾರನಂತೆ ವರ್ತಿಸುತ್ತಿದ್ದ, ಸಣ್ಣಪುಟ್ಟ ಸಮಸ್ಯೆಗಳನ್ನು ಸುಲಭವಾಗಿ ಬಗೆಹರಿಸುತ್ತಿದ್ದ ಎಪ್‌ಸ್ಟೀನ್ ಅನುಪಸ್ಥಿತಿ ತಂಡಕ್ಕೆ ಬಹುವಾಗಿ ಕಾಡತೊಡಗಿತು.

ಎಪ್‌ಸ್ಟೀನ್ ಗೈರುಹಾಜರಿಯಲ್ಲಿ, ಅನುಭವವಿಲ್ಲದ ನಾಲ್ವರು ಮಿತ್ರರು ಅನೇಕ ವ್ಯವಹಾರಗಳನ್ನು ಮಾಡಿ ಲಕ್ಷಾಂತರ ಹಣ ವ್ಯರ್ಥವಾಯಿತು. ಎಂತೆಂಥದೋ ವ್ಯಾಪಾರಗಳಲ್ಲಿ ಕೈ ಹಾಕಿ ನಷ್ಟ ಅನುಭವಿಸುವಂತಾಯಿತು. ಆದರೂ ಸಂಗೀತದ ಕೆಲಸಗಳೂ ನಡೆಯುತ್ತಿದ್ದವು. 1968ರಲ್ಲಿ ಮತ್ತೊಂದು ಆಲ್ಬಮ್ **'The Beatles' (bit.ly/3aJ3RuF)** ಬಿಡುಗಡೆಯಾಯಿತು. ಅದರ ಹೊದಿಕೆಯ ಮೇಲಿದ್ದ ಬರಿ ಬಿಳಿಯ ಬಣ್ಣದ ಕಾರಣಕ್ಕೆ ಅದು **White album** ಎಂದು ಪ್ರಸಿದ್ಧಿಗೆ ಬಂತು. ಅದು ಕೂಡಾ ಬಿಡುಗಡೆಯಾಗುತ್ತಿದ್ದಂತೆ ಬಿಸಿ ಕೇಕ್‌ನಂತೆ ಖಾಲಿಯಾಯಿತು. ಆದರೂ ಸದಸ್ಯರಲ್ಲಿ ಘರ್ಷಣೆ, ಭಿನ್ನಾಭಿಪ್ರಾಯಗಳು ಹೆಚ್ಚಾಗತೊಡಗಿದವು. ಒಮ್ಮೆಯಂತೂ ರಿಂಗೋ ಸ್ಟಾರ್ ಕೆಲವು ವಾರಗಳ ಕಾಲ ಸ್ಟುಡಿಯೊಗೆ ಬರಲಿಲ್ಲ. ಹಲವು ಬಾರಿ ಜಾನ್ , ಪೌಲ್, ಜಾರ್ಜ್ ನಡುವೆ ಜಗಳಗಳು ನಡೆಯತೊಡಗಿದವು. ಮುಖ್ಯವಾಗಿ ಹ್ಯಾರಿಸನ್ ಅಸಂತೃಪ್ತನಾಗಿದ್ದ. ಅವನ ಹಾಡು, ಸಾಹಿತ್ಯಕ್ಕೆ ಬೇಕಾದಷ್ಟು ಮನ್ನಣೆ ಸಿಗುತ್ತಿಲ್ಲ, ತನ್ನ ಹಾಡು ಎಷ್ಟೇ ಚೆಂದವಿದ್ದರೂ ಜಾನ್ ಮತ್ತು ಪೌಲ್‌ರ ರಚನೆ ಮುಗಿಯುವವರೆಗೂ ಆಲ್ಬಮ್‌ನಲ್ಲಿ ತನ್ನದಕ್ಕೆ ಜಾಗ ದೊರೆಯುತ್ತಿಲ್ಲ ಎಂದು ಅಸಮಾಧಾನಗೊಳ್ಳುತ್ತಿದ್ದ. ಜಾನ್‌ನು ಪೌಲ್ ಜೊತೆ ಕೆಲಸ ಮಾಡಲೇ ಆಸಕ್ತಿಹೀನನಾಗಿದ್ದ. ಜಾನ್‌ನ ಹೆಂಡತಿ ಓನೋಳು ಅವರ ಕೆಲಸಗಳ ಮಧ್ಯೆ ಮೂಗು ತೂರಿಸುವುದು ಉಳಿದವರಿಗೆ ಹಿಡಿಸಲಿಲ್ಲ. ಪ್ರತಿಯೊಬ್ಬರು ಸ್ವಂತ ಆಲ್ಬಮ್ ರಚಿಸುವತ್ತ ಆಸಕ್ತರಾದರು.

**'Abbey Road' (bit.ly/2UIsVfH)** ಮತ್ತು **'Let it be' (bit.ly/2XdYIqn)** 'ದಿ ಬೀಟಲ್ಸ್'ನ ಕೊನೆಯ ಆಲ್ಬಮ್‌ಗಳಾದವು. ಆ ವೇಳೆಗಾಗಲೇ ಒಟ್ಟಾಗಿ ಮಾಧ್ಯಮಗಳ ಮುಂದೆ ಬರುವುದನ್ನು ಗೆಳೆಯರು ನಿಲ್ಲಿಸಿದ್ದರು. ಅವರು ಬೇರಾಗುವುದು ಖಚಿತವಾಯಿತು. ತಾನಿನ್ನು ಬೀಟಲ್ಸ್‌ನಲ್ಲಿರುವುದಿಲ್ಲ ಎಂದು ಜಾನ್ ಮೊದಲು ಖಾಸಗಿಯಾಗಿ ಹೇಳಿದ. ವಿರಸ ಮುಂದುವರೆಯುವುದಿಲ್ಲ, ತಾವು ಒಟ್ಟಿಗೆ ಇರುತ್ತೇವೆಂದು ಅವರು ಎಷ್ಟೇ ಭಾವಿಸಿದರೂ ಮುಂದೆ ನಡೆದ ಅನೇಕ ಘಟನೆಗಳ ಸರಣಿ ಅವರನ್ನು ಒಬ್ಬರಿಂದೊಬ್ಬರಿಂದ ವಿಮುಖವಾಗಿಸಿದವು. ಎಲ್ಲರೂ ತಮ್ಮ ತಮ್ಮ ಸೋಲೋ ಆಲ್ಬಮ್‌ಗಳತ್ತ ಗಮನ ಹರಿಸುವುದರೊಂದಿಗೆ ಕಹಿ ಇನ್ನೂ ಹೆಚ್ಚಿತು. ಮುಂದಿನ ವರ್ಷ, 1970ರ ಏಪ್ರಿಲ್‌ನಲ್ಲಿ ಪೌಲ್ ಸಾರ್ವಜನಿಕವಾಗಿ ಬೀಟಲ್ಸ್ ಬ್ಯಾಂಡ್ ವಿಘಟಿತವಾಯಿತೆಂದು ಘೋಷಿಸುವುದರೊಂದಿಗೆ ಆ ತಂಡ ಅಧಿಕೃತವಾಗಿ ಮುರಿದು ಬಿತ್ತು.

ಅಲ್ಲಿಗೆ ಪಾಶ್ಚಾತ್ಯ ಸಂಗೀತದಲ್ಲಿ ಅನೇಕ ವರ್ಷಗಳ ಕಾಲ ಹೊಸ ಹೊಸ ತಂತ್ರ, ಹಾಡುಗಳೊಂದಿಗೆ ಸಂಗೀತ ಜಗತ್ತಿನ ಇತಿಹಾಸವನ್ನು ಬದಲಿಸಿದ 'ದಿ ಬೀಟಲ್ಸ್' ಎಂಬ ಮಾಂತ್ರಿಕಶಕ್ತಿಯ ಅಧ್ಯಾಯ ಮುಗಿಯಿತು. ಆ ಯುಗದ ಬದುಕಿಗೆ ಬೇಕೇಬೇಕಿದ್ದ ಬಣ್ಣವನ್ನು ತುಂಬಲಷ್ಟೇ ಜನಿಸಿದಂತೆ ಆ ತಂಡ ತಮ್ಮ ಕೆಲಸ ಮುಗಿಯುತ್ತಿದ್ದಂತೆ ವಿಘಟನೆಗೊಂಡು ಮರೆಯಾಯಿತು.

ಮುಂದೆ ಅನೇಕರು ಅನೇಕ ಬಾರಿ ಅವರನ್ನು ಒಟ್ಟಿಗೆ ಸೇರಿಸಲು ಯತ್ನಿಸಿದರೂ ಯಾವ ಪ್ರಯತ್ನವೂ ಯಶಸ್ವಿಯಾಗಲಿಲ್ಲ. 1980ರಲ್ಲಿ ಜಾನ್ ಗುಂಡೇಟಿನಿಂದ ಹತ್ಯೆಯಾಗುವುದರೊಂದಿಗೆ ಆ ಸಾಧ್ಯತೆ ಶಾಶ್ವತವಾಗಿ ದೂರವಾಯಿತು.


ಬೀಟಲ್ಸ್ ತಂಡದ ಜನಪ್ರಿಯತೆ ಎಷ್ಟು ಉತ್ತುಂಗದಲ್ಲಿತ್ತೆಂದರೆ ಅದನ್ನು 'ಬೀಟಲ್ಮೇನಿಯಾ' ಎಂದೇ ಕರೆಯಲಾಗುತ್ತಿತ್ತು.


1964ರಲ್ಲಿ ಬೀಟಲ್ಸ್ ತಂಡ ಬರುತ್ತದೆಂಬ ಸುದ್ದಿ ಕೇಳಿ ಆಮ್‌ಸ್ಟರ್‌ಡ್ಯಾಂ ವಿಮಾನ ನಿಲ್ದಾಣದಲ್ಲಿ ಸೇರಿರುವ ಮಾಧ್ಯಮದವರು

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in